# 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 26

# ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧಿನಿಯಮ 2001

## ಪ್ರಕರಣಗಳ ಪಟ್ಟಿ

ಪ್ರಕರಣಗಳು:


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. 12ನೇ ಪ್ರಕರಣದ ತಿದ್ದುಪಡಿ
3. 13ನೇ ಪ್ರಕರಣದ ತಿದ್ದುಪಡಿ
4. 19ನೇ ಪ್ರಕರಣದ ತಿದ್ದುಪಡಿ


## ಉದ್ದೇಶ ಮತ್ತು ಕಾರಣಗಳ ಹೇಳಿಕೆ

## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

**ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ:-**

(i) 12ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರದಿಂದ ಸಂದಾಯ ಮಾಡಬೇಕಾಗಿರುವ ಮೊಬಲಗನ್ನು ನಿರ್ಧರಿಸುವುದಕ್ಕಾಗಿ ಉಪಬಂಧ ಕಲ್ಪಿಸುವುದು;

(ii) ಸಣ್ಣ ಪುಟ್ಟ ಸಂದಿಗ್ಧತೆಗಳನ್ನು ತೆಗೆದುಹಾಕುವುದು, ಇದರಿಂದಾಗಿ, ಅಧಿನಿಯಮಿತಿಯು, ವಿದ್ಯುಚ್ಛಕ್ತಿ ಸುಧಾರಣೆಯಲ್ಲಿ ಹೇಳಲಾದ ಉದ್ದೇಶಗಳೊಂದಿಗೆ ಸುಸಂಗತವಾಗಿರುವುದು;

ಇತರೆ ಕೆಲವು ಆನುಷಂಗಿಕ ಬದಲಾವಣೆಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

**(2001ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:15 ಕಡತ ಸಂಖ್ಯೆ: ಸಂವ್ಯಶಾಇ 6 ಶಾಸನ 2001)**

## 2001ರ ಕರ್ನಾಟಕ ಅಧಿನಿಯಮ ಸಂಖ್ಯೆ 26

*(2001ರ ಆಗಸ್ಟ್ ಮೂವತ್ತೊಂದನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧಿನಿಯಮ, 2001

*(2001ರ ಆಗಸ್ಟ್ ಮೂವತ್ತನೇ ದಿನಾಂಕದಂದು ಕರ್ನಾಟಕ ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ನ್ನು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ನ್ನು (1999ರ ಕರ್ನಾಟಕ ಅಧಿನಿಯಮ 25) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ತಿದ್ದುಪಡಿ) ಅಧಿನಿಯಮ, 2001 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. 12ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ ಅಧಿನಿಯಮ, 1999ರ (1999ರ ಕರ್ನಾಟಕ ಅಧಿನಿಯಮ, 25) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 12ನೇ ಪ್ರಕರಣದಲ್ಲಿ,-

(1) (1)ನೇ ಉಪಪ್ರಕರಣದಲ್ಲಿ, ಎರಡನೇ ಪರಂತುಕದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

ಮತ್ತು ಪರಂತು, ನಿರ್ದಿಷ್ಟಪಡಿಸಿದ ಗ್ರಾಹಕರು ಅಥವಾ ಗ್ರಾಹಕರ ವರ್ಗಕ್ಕಾಗಿ ರಾಜ್ಯ ಸರ್ಕಾರವು ಪ್ರಕಟಿಸಿದ ನೀತಿಯನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರವು ಎರಡನೇ

---

(ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ:1618 ದಿನಾಂಕ 31.8.2001 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 6 ಶಾಸನ 2001)

ಪರಂತುಕದ ಅಡಿಯಲ್ಲಿ ಸಂದಾಯ ಮಾಡತಕ್ಕ ಮೊಬಲಗನ್ನು ಹಾಗೂ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಹಾಗೂ ಅಂಥ ಮೊಬಲಗನ್ನು ಯಾವ ಸಮಯದೊಳಗೆ ಸಂದಾಯ ಮಾಡಬೇಕೆಂಬುದನ್ನು ಆಯೋಗವು ನಿರ್ಧರಿಸತಕ್ಕದ್ದು.

**3. 13ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(ಎ) (3)ನೇ ಉಪಪ್ರಕರಣದಲ್ಲಿ ಕಾರ್ಯಾಚರಣೆಗಳನ್ನು ಹೊಂದಿರತಕ್ಕದ್ದು ಮತ್ತು ಅದಕ್ಕೆ ಎಂಬ ಪದಗಳಿಗೆ ಕಾರ್ಯಾಚರಣೆಗಳಿಗೆ ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ಬಿ) (6)ನೇ ಉಪಪ್ರಕರಣದಲ್ಲಿ ಎರಡು ಸ್ಥಳಗಳಲ್ಲಿ ಕಂಡು ಬರುವ ಅಥವಾ ವಿತರಣೆ ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**4. 19ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 19ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ, (ಬಿ) ಖಂಡದಲ್ಲಿ,-

(ಎ) (ii)ನೇ ಉಪಖಂಡದಲ್ಲಿ ಮತ್ತು ಎಂಬ ಪದವನ್ನು ಕೊನೆಯಲ್ಲಿ ಸೇರಿಸತಕ್ಕದ್ದು; ಮತ್ತು

(ಬಿ) (ii)ನೇ ಉಪಖಂಡದ ತರುವಾಯ ಈ ಮುಂದಿನ ಉಪಖಂಡವನ್ನು ಸೇರಿಸತಕ್ಕದ್ದು, ಎಂದರೆ:-

(iii) ಈ ವಿಷಯದಲ್ಲಿ ಕೆಪಿಟಿಸಿ ಯೊಂದಿಗೆ ಸಮಾಲೋಚಿಸುವುದು.

**5. 48ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 48ನೇ ಪ್ರಕರಣದಲ್ಲಿ, ಕರ್ನಾಟಕ ಸರ್ಕಾರಿ ವಿದ್ಯುತ್ ಉದ್ಯಮ (ಬಾಕಿ ವಸೂಲಿ) ಅಧಿನಿಯಮ, 1976 ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳಿಗೆ, ಕರ್ನಾಟಕ ವಿದ್ಯುಚ್ಛಕ್ತಿ ರವಾನೆ ನಿಗಮ (ಬಾಕಿಗಳ ವಸೂಲಿ) ಅಧಿನಿಯಮ, 1976 ಎಂಬ ಪದಗಳು, ಆವರಣಗಳು ಮತ್ತು ಅಂಕಿಗಳನ್ನು ಪ್ರತಿಯೋಜಿಸತಕ್ಕದ್ದು.